...ಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
...LATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ವಿಷಯ / ...UBJECT:

ಪತ್ರಿಕೆಯ ಹೆ... ...S PAPER:  ದಿನಾಂಕ : DATE : 31/08/20..

# ಗುಂಪು ಹಲ್ಲೆ: ಪಶ್ಚಿಮ ಬಂಗಾಳ ಸರ್ಕಾರದಿಂದ ಮಸೂದೆ

ಕೊಲ್ಕತ್ತ(ಪಿಟಿಐ): ಗುಂಪು ಹಲ್ಲೆ ತಡೆಯಲು ಹೊಸ ಮಸೂದೆಯನ್ನು ಪಶ್ಚಿಮ ಬಂಗಾಳ ಸರ್ಕಾರ ರೂಪಿಸಿದೆ. ಮಸೂದೆಯನ್ನು ವಿಧಾನಸಭೆ ಶುಕ್ರವಾರ ಅಂಗೀಕರಿಸಿದೆ.

ಪಶ್ಚಿಮ ಬಂಗಾಳ 'ಗುಂಪು ಹಲ್ಲೆಯ ವಿರುದ್ಧ ರಕ್ಷಣೆ ಮಸೂದೆ 2019'ಕ್ಕೆ ವಿಪಕ್ಷಗಳಾದ ಕಾಂಗ್ರೆಸ್ ಹಾಗೂ ಸಿಪಿಐ(ಎಂ) ಬೆಂಬಲ ನೀಡಿದವು. ಪ್ರಮುಖ ವಿಪಕ್ಷವಾಗಿರುವ ಬಿಜೆಪಿಯು ಮಸೂದೆಗೆ ಬೆಂಬಲವನ್ನಾಗಲೀ ವಿರೋಧವನ್ನಾಗಲೀ ವ್ಯಕ್ತಪಡಿಸಲಿಲ್ಲ; ಆದರೆ ಈ ಮಸೂದೆಯನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

ಮಸೂದೆ ಕುರಿತು ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಗುಂಪು ಹಲ್ಲೆ ಸಾಮಾಜಿಕ ಪಿಡುಗಾಗಿದ್ದು, ಈ ಪಿಡುಗಿನ ವಿರುದ್ಧ ಎಲ್ಲರೂ ಜತೆಯಾಗಿ ಹೋರಾಡಬೇಕಿದೆ. ಸೂಕ್ತ ನಿಯಮವನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕಿತ್ತು. ಆದರೆ ಇಲ್ಲಿಯವರೆಗೂ ಕಾನೂನು ರಚಿಸದೇ ಇರುವ ಕಾರಣ ರಾಜ್ಯ ಸರ್ಕಾರವೇ ಮಸೂದೆ ತಂದಿದೆ' ಎಂದರು.

**ಶಿಕ್ಷೆಯ ಪ್ರಮಾಣ**

- ಅಪರಾಧಿಗೆ 3 ವರ್ಷದವರೆಗೆ ಅಥವಾ ಜೀವಾವಧಿ ಜೈಲು ಶಿಕ್ಷೆ
- ಹಲ್ಲೆಗೊಳಗಾದ ವ್ಯಕ್ತಿ ಮೃತಪಟ್ಟರೆ ಅಪರಾಧಿಗೆ ಕಠಿಣ ಜೀವಾವಧಿ ಶಿಕ್ಷೆ
- ಜತೆಗೆ ₹5 ಲಕ್ಷದವರೆಗೆ ದಂಡ

6